# ರಾಜಕೀಯ ಒತ್ತಡ ರೂಪಿಸಬೇಕು..

ಪ್ರಕೃತಿ ಮನುಷ್ಯನ ಸುಖಸಂತೋಷದ, ನೆಮ್ಮದಿಯ ಬದುಕಿಗೆ ಅನೇಕ ವರದಾನಗಳನ್ನು ನೀಡಿದೆ. ಮರಗಿಡ, ಮೃಗಪಕ್ಷಿ, ನೀರು, ಗಾಳಿ, ಬೆಳಕು, ಶಾಖ (ಅಗ್ನಿ) ಇವೆಲ್ಲವೂ ಭೂ ಆಧಾರಿತವಾಗಿ ಅಸ್ತಿತ್ವದಲ್ಲಿವೆ ಮತ್ತು ಮಾನವನ ನಿರಂತರ ಬದುಕಿಗೆ ಶಾಶ್ವತ ಕೊಡುಗೆಗಳನ್ನು ನೀಡುತ್ತಾ ಬಂದಿವೆ. ಇವು ಮಾನವನ ಒಡನಾಡಿಗಳೂ ಹೌದು, ಜೀವನಾಡಿಗಳೂ ಹೌದು. ಈ ಪೈಕಿ ಯಾವುದೊಂದು ಕ್ಷೀಣಿಸಿದರು ಅಥವಾ ಇಲ್ಲವಾದರೂ ಮನುಷ್ಯ ಜೀವನ ದುರ್ಭರವಾಗುತ್ತದೆ ಮತ್ತು ಕ್ರಮೇಣ ಇಲ್ಲವಾಗುತ್ತದೆ ಎಂಬುದು ಸಾಮಾನ್ಯ ತಿಳಿವಳಿಕೆ.

ಮನುಷ್ಯನ ಬುದ್ಧಿಕೌಶಲಗಳು ಬೆಳೆದಂತೆಲ್ಲ 'ವಸ್ತು ಸಂಗ್ರಹಣೆ'ಯ ಮನೋಭಾವ ಜಾಗೃತಗೊಂಡು, ಸ್ವಾರ್ಥಪರತೆ ಹೆಚ್ಚತೊಡಗಿತು. ಕ್ಷಣಿಕದ ಹಸಿವನ್ನು ಇಂಗಿಸಿಕೊಳ್ಳುವುದಕ್ಕಾಗಿ ಮಾತ್ರವಲ್ಲ, ಆನಂತರದ ಹಸಿವಿಗೂ ಈಗಿನಿಂದಲೇ 'ಆಹಾರ ಸಂಗ್ರಹಣೆ' ಮಾಡಲು ಉಪಕ್ರಮಿಸಿದಂತೆಯೇ 'ಬಂಡವಾಳಶಾಹಿ ಮನೋಭಾವ' ಬೀಜಾಂಕುರಿಸಿ, ಪ್ರಕೃತಿದತ್ತವಾದ ಸಂಪತ್ತಿನ ಲೂಟಿಗೆ ಮತ್ತು ಆಕ್ರಮಣ ಮನೋಭಾವಕ್ಕೆ ಎಡೆಮಾಡಿಕೊಟ್ಟಿತು.

'ಮಾನವನ ಅಭಿವೃದ್ಧಿ' ಎಂಬುದು ಪ್ರಕೃತಿದತ್ತವಾಗಿ ಬಂದ ಭೂಸಂಪತ್ತನ್ನು ನಾಶಮಾಡುವ ಬದಲಾಗಿ, 'ಪ್ರಕೃತಿಯ ಸಹಜ ಕೊಡುಗೆ ಮತ್ತು ಮಾನವ ಶ್ರಮ'ದಿಂದ ಆಗಬೇಕೇ ಹೊರತು, ಅನ್ಯ ಮಾರ್ಗದಿಂದಲ್ಲ. ಇರುವ ಪ್ರಾಕೃತಿಕ ಸಂಪತ್ತನ್ನು ಹದವರಿತು ಉಳಿಸಿ–ಬೆಳೆಸಿಕೊಂಡು ಮನುಷ್ಯ ಶ್ರಮ ಸಾಧ್ಯತೆಯಿಂದ ಪಡೆಯುವ ಅಭಿವೃದ್ಧಿಯೇ ನೈಜವಾದ ಅಭಿವೃದ್ಧಿಯಲ್ಲದೆ ಬೇರೊಂದು ಅಲ್ಲ. ಈ ದೃಷ್ಟಿಯಿಂದ, ಉತ್ತರಕನ್ನಡ ಜಿಲ್ಲೆಯ ದಟ್ಟಅರಣ್ಯವನ್ನು ಸೀಳಿ ಹುಬ್ಬಳ್ಳಿ–ಅಂಕೋಲ ರೈಲುಮಾರ್ಗವನ್ನು ಮಾಡಲು ಹವಣಿಸಿರುವ ಸರ್ಕಾರದ ಪ್ರಯತ್ನ ಮತ್ತು 'ವನ್ಯಜೀವಿ ಮಂಡಳಿ'ಯ ಒಪ್ಪಿಗೆ ಈ ಎರಡೂ ಸ್ವಾರ್ಥಮೂಲವಾದವು ಮತ್ತು ಅನ್ಯ ಹಿತಾಸಕ್ತಿ ಉದ್ದೇಶಿತವಾದವು.

**'ಸಹ್ಯಾದ್ರಿ ಹತ್ತುವುದೆ ರೈಲು?' (ಕೇಶವ ಎಚ್. ಕೊರ್ಸೆ, ಏಪ್ರಿಲ್ 9) ಲೇಖನದ ನೆಪದಲ್ಲಿ ಒಂದು ಟಿಪ್ಪಣಿ.**

ಜಗತ್ತಿನ ಜೀವಜಾಲಗಳ ಆವಾಸ ಸ್ಥಾನದಲ್ಲಿ ಒಂದಾದ ಉತ್ತರಕನ್ನಡದ ಪಾರಂಪರಿಕ ದಟ್ಟಅರಣ್ಯವನ್ನು ಉಳಿಸಿ, ಎಲ್ಲ ಕಾಲದ ಎಲ್ಲ ಜನರಿಗೂ ಪ್ರಾಕೃತಿಕ ಬಳುವಳಿಯನ್ನು ನೀಡಬೇಕಾದುದು ನೈಜವಾದ ಮಾನವ ಕಳಕಳಿ. ವೈವಿಧ್ಯ ಜೀವಜಗತ್ತು ಮತ್ತು ವೃಕ್ಷಸಮೂಹವನ್ನು ಹೊಂದಿರುವ, ಅರಣ್ಯವನ್ನು ದೇಶದ ವಾಯುಗುಣ ಸುಸ್ಥಿತಿಯ ಕಾರಣದಿಂದ, ಮತ್ತು ಮಲೆನಾಡಿನ ಸಮಗ್ರತೆಯನ್ನು ಕಾಪಾಡುವ ದೃಷ್ಟಿಯಿಂದ ಹುಬ್ಬಳ್ಳಿ–ಅಂಕೋಲ ನಡುವಿನ ರೈಲುಮಾರ್ಗವನ್ನು ಅನುಷ್ಠಾನಕ್ಕೆ ತರದೆ 'ಅಭಿವೃದ್ಧಿ'ಯ ಬದಲಿ ವ್ಯವಸ್ಥೆಯನ್ನು ಕಂಡುಕೊಳ್ಳಬೇಕಿದೆ. ಈ ಪ್ರಕೃತಿ ಹಂತಕ ರೈಲುಮಾರ್ಗಕ್ಕೆ 'ವನ್ಯಜೀವಿ ಮಂಡಳಿ'ಯ ಕೆಲವು ಸದಸ್ಯರು ಒಪ್ಪಿಗೆ ನೀಡಿರುವುದನ್ನು ನೋಡಿದರೆ, ಆ ಮಂಡಳಿಯಲ್ಲಿರುವವರು ಬಹುಪಾಲು ಸರ್ಕಾರದ 'ಕೃಪಾಪೋಷಿತ' ಸದಸ್ಯರೇ ಆಗಿದ್ದಾರೆಂಬುದು ಮನದಟ್ಟಾಗುತ್ತದೆ.

ಪ್ರಕೃತಿ ದತ್ತವಾದ ಸಂಪತ್ತನ್ನು ಮುಂದಿನ ತಲೆಮಾರುಗಳಿಗೆ ತಪ್ಪಿಸುವ ಅಥವಾ ಇಲ್ಲವಾಗಿಸುವ ಹಕ್ಕನ್ನು ಯಾರು ಯಾರಿಗೂ ಇತ್ತಿಲ್ಲ. ಈ ಎಲ್ಲ ದೃಷ್ಟಿಯಿಂದ ಸರ್ಕಾರ ರೈಲು ಮಾರ್ಗದ ಯೋಜನೆಯ ಬಗ್ಗೆ ಪುನರ್‌ಪರಿಶೀಲಿಸಿ, ಜನತೆಯ ಭಾವನೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಉತ್ತರಕನ್ನಡ ಜಿಲ್ಲೆಯ ಪಾರಂಪರಿಕ ಅರಣ್ಯ ಸಂಪತ್ತನ್ನು ಉಳಿಸುವ ಮಹೋನ್ನತ ಕಾರ್ಯಕ್ರಮವನ್ನು ಕೈಗೊಳ್ಳಲಿ ಎಂಬುದು ಪರಿಸರ ಕಾಳಜಿಯುಳ್ಳವರೆಲ್ಲರ ನಮ್ರ ನಿವೇದನೆ.

1970ರ ದಶಕದಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ ಓದುಗರ ಮುಂದೆ ಇರಿಸಲು ಇಚ್ಛಿಸುತ್ತೇನೆ. 1966ರಿಂದ 1977ರವರೆಗೆ ಇಂದಿರಾಗಾಂಧಿ ದೇಶದ ಪ್ರಧಾನಮಂತ್ರಿ ಆಗಿದ್ದರು. ಆಗ ಕೇರಳ ರಾಜ್ಯವು 'ಅಭಿವೃದ್ಧಿ' ಹೆಸರಿನಲ್ಲಿ ಅಲ್ಲಿನ ಪಾರಂಪರಿಕ ದಟ್ಟ ಅರಣ್ಯ ಪ್ರದೇಶವನ್ನು ನಾಶ ಮಾಡಲು ಹೊರಟಾಗ, ಅಂದಿನ ಪರಿಸರಪ್ರಿಯರು ಮತ್ತು ಪರಿಸರತಜ್ಞರು 'ದಟ್ಟ ಅರಣ್ಯ ಪ್ರದೇಶವನ್ನು ಉಳಿಸಿ' ಎಂದು ಇಂದಿರಾಗಾಂಧಿಯವರ ಮೊರೆಹೊಕ್ಕರು. ಅದಕ್ಕೆ ಸ್ಪಂದಿಸಿದ ಅವರು, ಕೇರಳದ ಆ ದಟ್ಟ ಅರಣ್ಯ ಪ್ರದೇಶವನ್ನು ಉಳಿಸಲು ಆಜ್ಞೆ ಮಾಡಿ, ತಮ್ಮ ಪರಿಸರ ಕಾಳಜಿಯನ್ನು ವ್ಯಕ್ತಪಡಿಸಿದರು. ಅದೇ ಈಗಿರುವ ಪ್ರಸಿದ್ಧ 'ಸೈಲೆಂಟ್ ವ್ಯಾಲಿ' ಅರಣ್ಯ ಪ್ರದೇಶ. ನಮ್ಮ ಉತ್ತರಕನ್ನಡದ ದಟ್ಟ ಅರಣ್ಯವನ್ನು ಉಳಿಸಲು ಈಗ ನಾವು ನಮ್ಮ ಹಿಂದಿನವರ ಮಾರ್ಗದಲ್ಲೇ ಕ್ರಮಿಸಬೇಕಾದ ಅನಿವಾರ್ಯವಿದೆ. ಇಂದಿನ ಪ್ರಧಾನಿ ನರೇಂದ್ರಮೋದಿಯವರ ಮೇಲೆ 'ಉತ್ತರಕನ್ನಡ ಜಿಲ್ಲೆಯ ದಟ್ಟ ಅರಣ್ಯವನ್ನು ಉಳಿಸಲು' ಪರಿಸರಪ್ರಿಯರು ಒತ್ತಡ ಹೇರಬೇಕಾಗಿದೆ.

ಎಂತಾದರೂ ಸರಿ, ಉತ್ತರಕನ್ನಡದ ದಟ್ಟ ಅರಣ್ಯ ಉಳಿಯಲಿ. ಹಾಗೆಯೇ, ಹುಬ್ಬಳ್ಳಿ ಮತ್ತು ಸುತ್ತಲ ಪ್ರದೇಶದ ವಾಣಿಜ್ಯ ವ್ಯವಹಾರಗಳ ಅಭಿವೃದ್ಧಿಗೆ 'ಅರ್ಥಪೂರ್ಣ'ವಾದ ಬದಲಿ ವ್ಯವಸ್ಥೆಯನ್ನು ಸರ್ಕಾರ ಮನಃಪೂರ್ವಕವಾಗಿ ಮಾಡಲಿ. 'ಬದುಕಿ ಬದುಕಿಸು' ಎಂಬುದು ಅರಣ್ಯಜಗತ್ತಿಗೂ ಅನ್ವಯವಾಗಲಿ.

■ ಹೊರೆಯಾಲ ದೊರೆಸ್ವಾಮಿ




ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS

100% NATURAL

ARECA TEA

ಆರೋಗ್ಯಕರ • ರುಚಿಕರ • ಉಲ್ಲಾಸಕರ

ಪುದೀನ ಶುಂಠಿ ರೆಗ್ಯುಲರ್ ನಿಂಬೆ ತುಳಸಿ



ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ

+91 820 252 9023

ಕಸ್ಟಮರ್ ಕೇರ್ ನಂ:

+91 80 2672 6337 / +91 63610 08174

ಇ ಮೇಲ್: arecatea@gmail.com

ಅರೇಕಾ ಟೀಯನ್ನು

www.arecatea.in ನಲ್ಲಿ ಖರೀದಿಸಿ

ಆನ್‌ಲೈನ್ ನಲ್ಲಿ ಖರೀದಿಸಿ amazon